
# ‘ಯುದ್ಧದಲ್ಲಿ ತನ್ನನೇ ಕೊಂದರೆ ಸಾಕು’ ಎನ್ನಿಸಿಬಿಟ್ಟಿತು ಆ ನಮ್ಮಪ್ಪ ದೇವವ್ರತಗೆ



**ಸಂಜಯ:** ದಿನಾ ದಿನಾ ಕಿರೀಟಿಯ ಬಾಣಗಳಿಂದ ನಿನ್ನ ಕಡೆಯ ಮಹಾರಥರು ಪರಲೋಕ ಸೇರತಾ ಇದ್ದರು.

ಕೊಟ್ಟ ಮಾತಿನ ಪ್ರಕಾರ, ಭೀಷ್ಮನೂ ಕ್ಷಣಕ್ಷಣಕ್ಕೂ ವೀರರನ್ನು ಕೊಂದು ಪಡೆಪಡೆಗಳನ್ನೇ ಖಾಲಿ ಮಾಡತಾ ಇದ್ದ.

ಕೌರವರನ್ನು ಕಟ್ಟಿಕೊಂಡು ಭೀಷ್ಮ ಒಂದು ಕಡೆ ಪಾಂಚಾಲರ ಜತೆ ಅರ್ಜುನ ಒಂದು ಕಡೆ ಹೋರಾಡತಿದ್ದರೆ ಗೆಲುವು ಯಾರ ಕಡೆ ಅನ್ನುವುದು ಅನುಮಾನದ ಮಾತೇ.

ಆ ಹತ್ತನೇ ದಿನ ಭೀಷ್ಮಅರ್ಜುನ ಕೂಡಿಕೊಂಡ ಆ ಯುದ್ಧ ಪಡೆಪಡೆ ಸಮೂಹಗಳನ್ನೇ ಭಯಂಕರವಾಗಿ ಹತ ಮಾಡತಾ ಇತ್ತು.

ಶಂತನುವಿನ ಮಗ, ಪರಮಾಸ್ತ್ರ ತಿಳಿದವನು<br>
ಲಕ್ಷ ಲಕ್ಷ ಕೊಂದು ಹಾಕಿದ<br>
ಸತ್ತವರ ಹೆಸರು, ಕುಲ, ಗೋತ್ರ<br>
ಊರು, ಕೇರಿ ಕಲ್ಪ ಯಾರಿಗೆ ಗೊತ್ತು?<br>
ಭೀಷ್ಮನಿಂದ ಅಲ್ಲಿದ್ದ ಶೂರರೆಲ್ಲಾ ಸತ್ತರು ಅಷ್ಟೇ.

ಹೀಗೆ ಒಂದೇ ಸಮ ಪಾಂಡವರ ಸೈನ್ಯವೆಲ್ಲಾ ತನ್ನ ಕೈಲಿ ಉರಿದು ಹೋಗತಾ ಇರೋದನ್ನ ಕಂಡು ಆ ಪರಂತಪ, ದೃಷ್ಟಿಯಲ್ಲೆ ಶತ್ರು ಸುಡುವ ಆ ರಣಭಯಂಕರನಿಗೆ ತನ್ನ ಜೀವದ ಮೇಲೇ ಜುಗುಪ್ಸೆ ಬಂದು ಬಿಡತು.

‘ಮನುಷ್ಯರಲ್ಲೇ ಮೇಲಾದವರನ್ನೆಲ್ಲಾ ಕೊಲ್ತಾ ಇದೀನಲ್ಲಾ ಇದು ಕೂಡದು. ಯುದ್ಧದಲ್ಲಿ ತನ್ನನ್ನೇ ಯಾರಾದರೂ ಕೊಂದರೆ ಸಾಕು’ ಎನಿಸಿಬಿಟ್ಟಿತು.

ಆ ನಮ್ಮಪ್ಪ ದೇವವ್ರತಗೆ ತನಗೆ ಎದುರಾದ ಯುಧಿಷ್ಠಿರನಿಗೆ ಭೀಷ್ಮ ಹೀಗೆಂದ:

**ಭೀಷ್ಮ:** ಅಪ್ಪಾ ಯುಧಿಷ್ಠಿರ, ನೀನು ತಿಳಿದವನು. ನನ್ನ ಮಾತು ಕೇಳು, ನಿನಗೆ ಪುಣ್ಯ ಬರತ್ತೆ. ನನಗೆ ಸ್ವರ್ಗವೂ ಸಿಗತ್ತೆ. ಇಷ್ಟು ದಿನ ಯುದ್ಧ ಮಾಡಿ ಎಷ್ಟೊಂದು ಜೀವ ತೆಗೀತಾನೇ ಕಾಲ ಕಳೆದು ಬಿಟ್ಟೆ. ಈ ಶರೀರವೇ ನನಗೆ ಸಾಕಾಗಿಹೋಗಿದೆ ಕಣೋ ನನ್ನಪ್ಪಾ.

ಇನ್ನು ಸಾಕು. ಅರ್ಜುನನನ್ನು ಮುಂದಿಟ್ಟುಕೊಂಡು ಸೃಂಜಯ, ಪಾಂಚಾಲರನ್ನು ಒಟ್ಟುಹಾಕಿಕೊಂಡು ಕಷ್ಟಪಟ್ಟು ಹೇಗಾದರೂ ಮಾಡಿ ನನ್ನ ಬೇಗ ಮುಗಿಸಿಬಿಡೋ ನನ್ನಪ್ಪಾ. ನನಗೆ ಖುಷಿಪಡಿಸಬೇಕು ಅಂತಿದ್ದರೆ ಇಷ್ಟು ಮಾಡಿಕೊಡು ಕಂದಾ.

**ಸಂಜಯ:** ಸತ್ಯವನ್ನು ಕಾಣಬಲ್ಲ ಪಾಂಡುವಿನ ಮಗನಿಗೆ ಭೀಷ್ಮನ ಮನಸ್ಸು ತಿಳಿಯಿತು. ಸೃಂಜಯರನ್ನ ಭೀಷ್ಮನ ಮುಂದೆ ನಿಲ್ಲಿಸಿದ.

ಧೃಷ್ಟದ್ಯುಮ್ನ ಯುಧಿಷ್ಠಿರ ಇಬ್ಬರೂ ಸೇನೆಗೆ ಕುಮ್ಮಕ್ಕು ಕೊಡುತ್ತಾ

‘ಎದುರು ಬೀಳಿ, ಭೀಷ್ಮನ ಮೇಲೆ ಕಾಳಗಮಾಡಿ, ಗೆದ್ದೇ ಗೆಲ್ಲತೇವೆ<br>
ಸತ್ಯಸಂಧ ಅರ್ಜುನ ಇದಾನೆ, ಧೃಷ್ಟದ್ಯುಮ್ನ ನಿಮ್ಮನ್ನ ಕಾಯುತಾನೆ<br>
ಈ ಭೀಮ ಇದಾನೆ ಹೆದರಿಕೆಗೆ ಕಾರಣವೇ ಇಲ್ಲ<br>
ಶಿಖಂಡಿಯನ್ನು ಮುಂದಿಟ್ಟುಕೊಂಡು ಕಾದಾಡಿದರೆ ಭೀಷ್ಮನನ್ನು ಗೆದ್ದೇ ಗೆಲ್ಲತೀವಿ’ ಅಂದ.

ಆ ಮಾತಿನಿಂದಲೇ ಅವರು ಉಸಿರು ಕೂಡಿಸಿಕೊಂಡು, ಆ ಮಾತನ್ನೇ ಉಸಿರು ಮಾಡಿಕೊಂಡು, ಅದನ್ನೇ ಧರ್ಮ ಅಂದುಕೊಂಡು

ಆ ಹತ್ತನೇ ದಿನದಲ್ಲಿ ಅದೇ ಸರ್ವಸ್ವ ಅಂದುಕೊಂಡು ಯುದ್ಧ ಮಾಡಿದರು ಅಮಲಿನಲಿ

ಭೀಷ್ಮನ ಪತನ ಬಿಟ್ಟು ಬೇರೇನೂ ಕಾಣದ ಹಾಗೆ

ಮುಂದೆ ಶಿಖಂಡಿ, ಅವನ ಬೆನ್ನಿಗೆ ಅರ್ಜುನ, ಭೀಷ್ಮನನ್ನು ಕೆಡವೋದಕ್ಕೆ ಒಟ್ಟಿಗೆ ನಿಂತರು.

ಈ ಕಡೆ ನಿನ್ನ ಮಗ, ನಾನಾ ರಾಜರು ದ್ರೋಣ ಅಶ್ವತ್ಥಾಮನಿನ್ನ ಮಗನ ತಮ್ಮದೀರು, ಭೀಷ್ಮನಿಗೆ ಕಾವಲಾದರು. ಬಲಗಾರ ಅಶ್ವತ್ಥಾಮ ತನ್ನ ತಮ್ಮಂದಿರ ಜತೆ ಭೀಷ್ಮನನ್ನು ಮಧ್ಯ ಬಿಟ್ಟುಕೊಂಡು ಕಾವಲು ನಿಂತ. ಎಂಥಾ ದೊಡ್ಡ ಯುದ್ಧ ಅದು. ಆ ಸೇನೆಗಳು ನಡೆದಾಡೋ ಪಾದಗಳ ಪರಾಕ್ರಮಕ್ಕೇನೇ ಭೂಮಿ ನಡುಗುತ್ತಾ ಇತ್ತು. ನಿನ್ನವರು ಆ ಕಡೆಯವರು ಇಬ್ಬರೂ ಭೀಷ್ಮನನ್ನು ಕಣ್ಣಲ್ಲಿಟ್ಟುಕೊಂಡು ಒಬ್ಬರ ಮೇಲೊಬ್ಬರು ಕಾದಾಡಿದರು. ರಥವನ್ನು ರಥ, ಕುದುರೇನ ಕುದುರೆ, ಆನೇನ ಆನೆ, ಕಾಲಾಳನ್ನ ಕಾಲಾಳು ಹೊಡೆದು ಕೊಲ್ಲುತಿದ್ದವು.

ಪಾಂಡವರು ಕೌರವರು ಭೀಷ್ಮನಿಗಾಗಿ ಹೊಡೆದಾಡಿದರು. ಒಂದು ಮಾಂಸದ ತುಂಡಿಗೆ ಎರಡು ಗಿಡುಗ ಹೊಡೆದಾಡುವ ಹಾಗೆ ಒಬ್ಬರು ಇನ್ನೊಬ್ಬರನ್ನ ಕೊಲ್ಲಬೇಕು ಅಂತ ಯುದ್ಧ ಮಾಡಿಬಿಟ್ಟರು.

(ಸಶೇಷ)